**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೇಶಲ ಕೇಸ ನಂಃ 644/2025
ಪಿಡಬ್ಲು :6 ಸಿಡಬ್ಲು :21

| | |
|---|---|
| ಸಾಕ್ಷಿಯ ಹೆಸರು | : ಡಾಃ ಲಿಯಾಕತಅಲಿ ಖಾನ ಕಾಗದಗಾರ |
| ಗಂಡನ ಹೆಸರು | : ಶ್ರೀ. ಅನ್ವರ ಖಾನ |
| ವಯಸ್ಸು | : 50 ವರ್ಷ |
| ಉದ್ಯೋಗ | : ವೈದ್ಯಾಧಿಕಾರಿಗಳು, ಕಿಮ್ಸ ಆಸ್ಪತ್ರೆ, ಹುಬ್ಬಳ್ಳಿ |
| ವಾಸ್ತವ್ಯ | : ಹುಬ್ಬಳ್ಳಿ |
| ದಿನಾಂಕ | : 07-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(**ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಹುಬ್ಬಳ್ಳಿ ತಮ್ಮ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಮೆಡಿಕಲ್ ರೆಕಾರ್ಡ್ಸ ಆಫೀಸರ ಶ್ರೀ.ರಾಘವೇಂದ್ರ ಅವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಸ್. ಪಾಟೀಲ ರವರನ್ನು ಕೋಆರ್‌ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

(**1ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ**

**ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ಜೈಲ ವಾರ್ಡನ ಅವರನ್ನು ಮತ್ತು ನ್ಯಾಯಾಲಯದ ಪ್ರಥಮ ದರ್ಜೆ ಗುಮಾಸ್ತರಾದ ಎಸ ಎಸ್ ಪಾಟೀಲ ಅವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ತೆರೆದ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)**

## ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

2010 ರಿಂದ ಈ ದಿನದವರೆಗೆ ನಾನು ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 24-08-2025 ರಂದು ಮಧ್ಯಾಹ್ನ 2:12 ನಿಮಿಷಕ್ಕೆ ಗಾಯಾಳು ಸಂದೀಪ ಲಕ್ಷ್ಮಣ ಕಾಂಬಳೆ ಎನ್ನುವವರು ಹೊಡೆದಾಟದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಗಾಯಾಳುವಿನ ಸಹೋದರಿ ರಾಜೇಶ್ವರಿ ಎನ್ನುವವರು ಅವರನ್ನು ಕರೆದುಕೊಂಡು ಬಂದಿದ್ದರು. ಗಾಯಾಳು ಬೆಳಗಾವಿಯ ಕೆ.ಎಲ್.ಇ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು.

3. ದಿನಾಂಕಃ 24-08-2025 ರಂದು ಗಾಯಾಳು ಸಂದೀಪ ಕಾಂಬಳೆ ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದು, ದಿನಾಂಕಃ 12-09-2025 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತಾರೆ.

4. ಗಾಯಾಳುವಿನ ಎದೆ ಭಾಗ ಮತ್ತು ಬಲ ತೊಡೆಯ ಎಕ್ಸರೆಯನ್ನು ತೆಗೆಯಲಾಗಿದೆ. ಆ ಎರಡೂ ವರದಿಯಲ್ಲಿ ಮೂಳೆ ಮುರಿತದ ಬಗ್ಗೆ ವರದಿಯಾಗಿರುವುದಿಲ್ಲ.

5. ಕುತ್ತಿಗೆ ಭಾಗ ಮತ್ತು ತಲೆಯ ಭಾಗದ C.T. ಸ್ಕ್ಯಾನಿಂಗ್ ಮಾಡಿಸಲಾಗಿದ್ದು, ಕುತ್ತಿಗೆ ಭಾಗದಲ್ಲಿ ಬಲಭಾಗ ಮತ್ತು ಎಡಭಾಗದ Mandibal ಮೂಳೆ ಮುರಿದಿರುವುದು ಕಂಡುಬಂದಿರುತ್ತದೆ.

6. ಬಲ ಭಾಗದ ತೊಡೆ ಮೂಳೆ ಸಹ ಮುರಿದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ನಾನು ವರದಿಯನ್ನು ನೀಡಿದ್ದೇನೆ ಮತ್ತು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೀಲು ಮತ್ತು ಮೂಳೆ ತಜ್ಞರಿಗೆ ಶಿಫಾರಸ್ಸು ಮಾಡಿ ಕಳುಹಿಸಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ–7 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–7 [ಎ] ಎಂದು ಗುರುತಿಸಲಾಯಿತು. ನಾನು ಗಾಯಾಳುವಿನ ರಕ್ತ ಪರೀಕ್ಷೆ ಮಾಡಿಸಿದ್ದು, ಅದರ ಪ್ರಕಾರ ಗಾಯಾಳುವಿನ ರಕ್ತವು 'A+' ಗುಂಪಿಗೆ ಸೇರಿರುತ್ತದೆ. ವರದಿಯನ್ನು ನಿಪಿ–8 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–8 [ಎ] ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ ಟಿ.ಎಲ್.ಪಿ ವಕೀಲರಿಂದ</u>**

ಗಾಯಾಳುವಿನ ಜೊತೆಗೆ ಅವರ ಸಹೋದರಿ ಮಾತ್ರ ಬಂದಿದ್ದರು. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಆತನೊಂದಿಗೆ ಸಹಾಯಕರಾಗಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿದಂತಹ ವ್ಯಕ್ತಿಯ ಸಹಿಯನ್ನು ರಜಿಸ್ಟರನಲ್ಲಿ ಪಡೆಯುತ್ತೇವೆ ಎನ್ನುವುದು ಸರಿ. ಆಸ್ಪತ್ರೆಯ ದಾಖಲೆಗಳಲ್ಲಿ ರಾಜೇಶ್ವರಿ ಎನ್ನುವವರು ಸಹಿ ಮಾಡಿದ್ದಾರೆ.

2. ನಾನು ನಿಪಿ–7 ವರದಿಯನ್ನು ನೀಡುವ ಪೂರ್ವದಲ್ಲಿ ಕೆ.ಎಲ್.ಇ ಆಸ್ಪತ್ರೆಯ ವೈದ್ಯರಿಂದ ವರದಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ–7 ರಲ್ಲಿ ನಮೂದು ಮಾಡಿರುವ ಯಾವುದೇ ಗಾಯಗಳು ಮಾರಣಾಂತಿಕ ಗಾಯಗಳು ಅಲ್ಲ ಎನ್ನುವುದು

ಸರಿಯಲ್ಲ. ಗಾಯಾಳು ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ಪ್ರಜ್ಞೆ ಇತ್ತು ಮತ್ತು ಅವರಿಗೆ ನೋವು, ಯಾತನೆ ಇತ್ತು. ನಿಪಿ–7 ನ್ನು ಗಾಯಾಳು ಆಸ್ಪತ್ರೆಯಿಂದ ಬಿಡುಗಡೆಯಾದ ಒಂದು ತಿಂಗಳ ನಂತರ ನೀಡಲಾಗಿದೆ ಎನ್ನುವುದು ಸರಿ.

3. ನಿಪಿ–7 ಮತ್ತು ನಿಪಿ–8 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ನೀಡಲಾಗಿದೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.